

ಫ್ಯಾಷನ್ ಪ್ರಪಂಚದಲ್ಲಿ ದಿನದಿನವೂ ಹೊಸತನವಿರುತ್ತದೆ. ಹಳೆಯ ಆಭರಣವಿರಲಿ, ಉಡುಪೇ ಇರಲಿ, ಆಧುನಿಕ ಸ್ಪರ್ಶದೊಂದಿಗೆ ಹೊಸತನಕ್ಕೆ ಹೊಂದಿಕೊಂಡಿರುತ್ತದೆ. ಆಭರಣ ಲೋಕದಲ್ಲಂತೂ ಕಣ್ಣಿಗೆ ಒಪ್ಪುವ, ಮನಸ್ಸಿಗೆ ಮುದ ನೀಡುವ ಒಂದಕ್ಕಿಂತ ಒಂದು ಸುಂದರವಾದ ಒಡವೆಗಳು ನಿತ್ಯವೂ ಬಂದಿರುತ್ತದೆ. ಮಹಿಳೆ ಆಯ್ಕೆ ಮಾಡುವಲ್ಲಿ ಸೋಲುವುದೋ, ವಿನ್ಯಾಸಗಾರನೇ ಬೇಡಿಕೆಗೆ ಸ್ಪಂದಿಸುವುದೋ ಒಂದೂ ತಿಳಿಯದಂತಹ ಪರಿಸ್ಥಿತಿಯೂ ನಿರ್ಮಾಣವಾಗುತ್ತಿದೆ.

ಆಭರಣವೂ ತನ್ನ ವಿನ್ಯಾಸದಲ್ಲಿ ಬದಲಾವಣೆಗೊಳಗಾಗಿ ಮತ್ತೆ ಪುನಃ ಮೊದಲಿನ ವಿನ್ಯಾಸಕ್ಕೆ ಬಂದರೂ ವಿಭಿನ್ನವಾದದ್ದನ್ನೇ ಮಹಿಳೆಯರು ಅರಸಿ ಹೋಗುವುದು ಹೆಚ್ಚಾಗುತ್ತಿದೆ. ಇದಕ್ಕೆ ಹೊಸತನ್ನು ಬಯಸುವ ನಮ್ಮ ಗುಣ.

ಈಗಿನ ಹೆಣ್ಮಕ್ಕಳು ಕುತ್ತಿಗೆಯ ಆಭರಣ ಧರಿಸುವುದಕ್ಕಿಂತ ಗುಂಗುರು ಗುಂಗುರಾಗಿ ಇಳಿಬಿಟ್ಟ ಕೂದಲಿನ ಹಿಂದೆ ಇರುವ ಕಿವಿಯಲ್ಲಿ ಉದ್ದವಾಗಿ ಅಲ್ಲಾಡುವ ಕಿವಿ ಲಾಂಗ್ ಹ್ಯಾಂಗಿಂಗ್ ಇಷ್ಟಪಟ್ಟು ತೊಟ್ಟುಕೊಳ್ಳುತ್ತಾರೆ. ಅದು ವೃತ್ತಾಕಾರವಾಗಿದ್ದು ಹರಳುಗಳನ್ನು ಹೊಂದಿದ್ದು ಒಂದರ ಅನಂತರ ಒಂದರಂತೆ ಸಾಲು ಸಾಲಾಗಿ ಪೋಣಿಸಿದ್ದು ವಿನ್ಯಾಸ ಎದುರು ಮುಖವಾಗಿರಬೇಕು. ಮೇಲೊಂದು ಎಸ್ ಹುಕ್ ಇದ್ದು ಇದರ ಭಾರವನ್ನು ತಡೆಯಬೇಕು. ಹ್ಯಾಂಗಿಂಗ್ ಓಲೆ ಎಷ್ಟು ಉದ್ದವಾಗಿರಬೇಕೆಂದರೆ ಭುಜದವರೆಗೆ ತಾಗದಂತೆ ಕೆನ್ನೆಯ ತನಕ ಇದ್ದರೆ ಸಾಕು. ಆಗ ವಿನ್ಯಾಸ ಸರಿಯಾಗಿ ಕಾಣುತ್ತದೆ.

ಹ್ಯಾಂಗಿಂಗ್‌ಗಳಲ್ಲೂ ಅದೆಷ್ಟು ಬಗೆ, ವಿನ್ಯಾಸ, ವೈವಿಧ್ಯ! ಜಾಲರಿ ಹ್ಯಾಂಗಿಂಗ್, ಗೊಂಚಲು ಹ್ಯಾಂಗಿಂಗ್, ಲೋಲಾಕ್.. ಹೀಗೆ.

## ಜಾಲರಿ ಹ್ಯಾಂಗಿಂಗ್

ಇದು ಎರಡು ಮೂರು ಎಳೆಯನ್ನು ಹೊಂದಿದ್ದು ತುದಿಯಲ್ಲಿ ಡೀಪ್ ಶೇಪನ್ನು ಹೊಂದಿದೆ 3 ಎಳೆಗಳು ಬೇರೆ ಬೇರೆ ಅಳತೆಯಲ್ಲಿದ್ದು ಸರಿಯಾಗಿ ಒಂದರ ಅನಂತರ ಒಂದರಂತೆ ಕಾಣುವಂತೆ ಇರಬೇಕು. ಮೇಲುಗಡೆ ಕಿವಿಯೋಲೆ ಇದ್ದರೂ ಸರಿ, ಎಸ್ ಹುಕ್ ಆದರೂ ಸರಿ. ಯಾವುದೇ ಮಾಡರ್ನ್ ವಿನ್ಯಾಸದ ಉಡುಪುಗಳಿಗೆ, ತರುಣಿಯರಿಗೆ ಬಹಳ ಸುಂದರವಾಗಿ ಕಾಣುತ್ತದೆ. ಇದು ಬಿಳಿ ಮುತ್ತು ಎಲ್ಲಾ ಬಣ್ಣದ ಬಟ್ಟೆಗಳಿಗೂ ಹೊಂದಿಕೊಳ್ಳುತ್ತದೆ.

## ಗೊಂಚಲು ಹ್ಯಾಂಗಿಂಗ್

ಮುತ್ತುಗಳ, ರೂಬಿ ಹರಳುಗಳ ಅಥವಾ ಚಿನ್ನದ ಗುಂಡುಗಳ ಗೊಂಚಲುಗಳು ಅಲ್ಲಲ್ಲಿ ಇದ್ದು ಕಿವಿಯಿಂದ ಕೆಳಭಾಗದಲ್ಲಿ ದ್ರಾಕ್ಷಿ ಗೊಂಚಲುಗಳಂತೆ ಹತ್ತಿರ ಹತ್ತಿರವಾಗಿ ಇರಬೇಕು. ಇದರಲ್ಲಿ ವಿಶೇಷತೆ ಏನೆಂದರೆ ಆದಷ್ಟು ಮುತ್ತು, ಹರಳುಗಳ ಜೊತೆ ಹೊಳೆಯುವ ಬಂಗಾರದ ಗುಂಡು ಇದ್ದು ಎದ್ದು ಕಾಣಬೇಕು. ಆಗಲೇ ಅದಕ್ಕೆ ಶೋಭೆ.

## ಲೋಲಾಕ್

ಇದು ಹಿಂದಿನಿಂದಲೂ ಬಳಕೆಯಲ್ಲಿರುವ ಒಂದು ಆಭರಣ. ಸಾಧಾರಣ ಸ್ವಲ್ಪ ಅಗಲವಾಗಿದ್ದು ಅದರಲ್ಲಿ ಎಲೆ, ಹೂ ವಿಧ ವಿಧದ ವಿನ್ಯಾಸಗಳು ಇರುತ್ತವೆ. ಜೊತೆಗೆ ಈಗ ವಿವಿಧ ರೀತಿಯ ಶೇಪ್‌ಗಳಲ್ಲಿ ಲೋಲಾಕನ್ನು ವಿನ್ಯಾಸ ಮಾಡಲಾಗುತ್ತದೆ. ದೊಡ್ಡ ಲೋಲಾಕ್ ಧರಿಸುವಾಗ ಮೇಲೆ 4 ಗ್ರಾಂ ಚಿನ್ನವಾದರೂ ಕಿವಿಯೋಲೆಗೆ ಇರಬೇಕು. ಇಲ್ಲವಾದಲ್ಲಿ ಲೋಲಾಕ್ ಒಪ್ಪವಾಗಿ ನಿಲ್ಲುವುದಿಲ್ಲ.

## ಜುಮುಕಿ

ಸರದೊಂದಿಗೆ ಜುಮುಕಿ ಈಗಿನ ಹೊಸ ಟ್ರೆಂಡ್ ಇದು. ಹೆಗಲು ಮುಟ್ಟುವಷ್ಟು ಉದ್ದದ ಸರ ಅಥವಾ ಮುತ್ತಿನ ಸರವಾಗಿದ್ದು ಕೆಳಗಡೆ ಜುಮುಕಿ ದೊಡ್ಡ ಹರಳು/ಮುತ್ತು ಇದ್ದು ಭುಜಕ್ಕೆ ತಾಗುವಷ್ಟು ಉದ್ದವಾಗಿರಬೇಕು, ಅದರ ನೋಟವೇ ಸೊಗಸು. ಜುಮುಕಿಯಲ್ಲಿ ರೈಸ್ ಪರ್ಲ್ ಇದ್ದರೆ ಮುತ್ತುಗಳ ಜೋಡಣೆ ಬಹಳ ಅಂದವಾಗಿರುತ್ತದೆ. ಜುಮುಕಿ ಆದಷ್ಟು ಹಗುರವಾಗಿರಲಿ.

ಮುತ್ತಿನ ಹ್ಯಾಂಗಿಂಗ್ ಜಾಲರಿ

ಹಗುರವಾದ ಆದರೆ ಅಗಲವಾದ ಜುಮುಕಿಯಲ್ಲಿ ಸುತ್ತಲೂ ಮಲ್ಲಿಗೆ ಮಾಲೆ ಚಪ್ಪರದಲ್ಲಿ ಇಳಿ ಬಿಟ್ಟಂತೆ ಮುತ್ತಿನಿಂದ ಕೂಡಿದ ಜಾಲರಿಗಳನ್ನು ಇಳಿಬಿಟ್ಟು ವಿನ್ಯಾಸಗೊಳಿಸಬೇಕು. ಅದರಲ್ಲಿ ಕೆಲವು ಜಾಲರಿಗಳು ಉದ್ದವಾಗಿಯೂ ಇನ್ನೂ ಕೆಲವು ಗಿಡ್ಡವಾಗಿಯೂ ಒಂದರ ಅನಂತರ ಒಂದರಂತೆ ನಮಗೆ ಬೇಕಾದ ರೀತಿಯಲ್ಲಿ ವಿನ್ಯಾಸಗೊಳಿಸಿದ್ದನ್ನು ಧರಿಸಬಹುದು. ಗಮನಿಸಿ ಹಿಂಬದಿ ಉದ್ದವಾಗಿದ್ದು ಎದುರು ಬದಿ ಗಿಡ್ಡ ಜಾಲರಿಗಳು ಇರಬೇಕು.

ಆಭರಣವನ್ನು ಪ್ರೀತಿಯ ಸಂಕೇತವಾಗಿ ನೀಡುವ ಉಡುಗೊರೆಯಾಗಿ ಬಳಸಬಹುದು. ಇಂತಹ ಆಭರಣಗಳು ಪ್ರೇಮಿಸುವ ಹೃದಯಗಳ ಭಾವಕ್ಕೆ ಸ್ಪಂದಿಸುವ, ಇಷ್ಟಪಡುವ ಆಭರಣಗಳು. ಒಂದು ಉಂಗುರದ ಜೊತೆಗೆ ಕಿವಿಯೋಲೆಯನ್ನು ಬಾಳಸಂಗಾತಿಗೆ ನೀಡಿದಾಗ ಆಗುವ ಸಂತಸವನ್ನು ಅಳೆಯಲು ಸಾಧ್ಯವಿಲ್ಲ. ಅಪ್ಪ ಮಗಳಿಗೂ ಇಂತಹ ಆಭರಣವನ್ನು ಬಹಳ ಪ್ರೀತಿಯಿಂದ ನೀಡಬಹುದು. ■

## ಕಸೂತಿ ಒಡವೆಗಳು

ಒಡವೆಗಳಲ್ಲಿ ಕುಸುರಿ ಕೆತ್ತನೆಯಿಂದ ಮಾಡಿದ ಆಭರಣಕ್ಕೆ ಈಗ ಎಲ್ಲಿಲ್ಲದ ಬೇಡಿಕೆ. ಅದು ನೆಕ್ಲೇಸ್ ಆಗಿರಲಿ, ಬಳೆ, ಕಿವಿಯೋಲೆಯೇ ಆಗಿರಲಿ. ಚಿನ್ನದ ಅಡಿಪಾಯವಿರುವ ಒಡವೆಗೆ ಅಮೆರಿಕನ್ ಡೈಮಂಡ್, ಕಲರ್ ಡೈಮಂಡ್, ಮುತ್ತು, ಹವಳ, ನೀಲ ಪಚ್ಚೆ ಮುಂತಾದ ನವರತ್ನಗಳನ್ನು ಸೇರಿಸಿ ಕಸೂತಿ ವಿನ್ಯಾಸದಲ್ಲಿ ಸಿದ್ಧಪಡಿಸಿದ ಒಡವೆ ಇಂದಿನ ಹೊಸ ಫ್ಯಾಷನ್ ಟ್ರೆಂಡ್.

ಈಗೀಗ ಕಂಠಿಹಾರ, ಕಾಸಿನ ಸರ, ಗೆಜ್ಜೆಮಾಲಾಕ್, ಅವಲಕ್ಕಿ ಸರ, ಕೊತ್ತಂಬರಿ ಸರ, ಜುಮುಕಿ, ಕಿವಿಯೋಲೆ ಅಷ್ಟೇ ಏಕೆ ಹಳೆಯ ಬೆಳ್ಳಿಯ ಒಡವೆ ಕೂಡ ಹೊಸ ವಿನ್ಯಾಸ ಪಡೆದುಕೊಳ್ಳುತ್ತಿದೆ.

ಚಿನ್ನದ ಬೆಲೆ ಗಗನಕ್ಕೇರಿದರೂ, ಹೊಸ ವಿನ್ಯಾಸದ ಆಕರ್ಷಕ ಒಡವೆ ಕಂಡರೆ ಮಹಿಳೆಯರ ಕಣ್ಣರಳುತ್ತದೆ. ಹೇಗಾದರೂ ಹಣ ಹೊಂದಿಸಿ ತಿಜೋರಿಯಲ್ಲಿ ಸೇರಿಸುವ ಆಸೆ ಇನ್ನಿಲ್ಲದಂತೆ ಕಾಡುತ್ತದೆ. ಈಗ ಚಿನ್ನವನ್ನು ಖರೀದಿಸುವುದು ಎಂದರೆ ಅದು ಮಧ್ಯಮವರ್ಗದವರಿಗೆ ಗಗನಕುಸುಮವೇ ಸರಿ. ಮನೆಯಲ್ಲಿ ಅಜ್ಜಿಯರ ಕಾಲದ ಚಿನ್ನವಿದ್ದರೆ ಅದನ್ನೇ ಕರಗಿಸಿ ಕುಸುರಿ ಕೆತ್ತನೆ ಇರುವ ಒಡವೆ ಮಾಡಿಸಿಕೊಳ್ಳಿ. ಈಗಿನ ಫ್ಯಾಷನ್ ಕೂಡ ಅದೇ.